ಬದುಕಿಗೆ ಕಡೆಗೂ ಬೇಕಾಗುವುದು ಇವಿಷ್ಟೇನಾ?

'ಅಯ್ಯೋ ಎಂತಾ ಮರೆವು, ನೋಡ್! ಊಟಕ್ಕಿರೂಂತಾ ಹೇಳಿ, ಎಂತದೂ ಮಾಡ್ದೇ ಸುಮ್ನೇ ಮಾತ್ನಾಡ್ತಾಯಿದೀನಿ. ಅರ್ಧ ಗಂಟೆ ಮಾರಾಯ. ನಿನ್ನಿಷ್ಟದ್ದೇ ಮೇಲೋಗರ ಮಾಡ್ಬಿಡ್ತೀನಿ.'

ಅವಳು ಧಾವಂತದಿಂದ ಎದ್ದು ಹಾಲಿಗೆ ಹೊಂದಿಕೊಂಡಂತೇ ಇದ್ದ ತೆರೆದ ಅಡುಗೆ ಮನೆಯತ್ತ ಹೋದಳು. ಯಾಕೋ ಗೊಂದಲವಾಗಿ ಸೋಫಾದ ಹಿಂದೆ ಇಳಿಬಿಟ್ಟಿದ್ದ ದಪ್ಪ ಪರದೆಯಾಚೆ ಚೂರೇ ಚೂರು ತೆರೆದ ಕಿಟಕಿಯಾಚೆ ಹಣಿಕಿದೆ. ದಿನವೊಂದು ಸದ್ದಿಲ್ಲದೇ ನಿಚ್ಚಳವಾಗುತ್ತಾ ಎಲ್ಲೆಲ್ಲೂ ಢಾಳಾಗಿ ಹರಡಿದ ಸೂರ್ಯನ ಹಳದಿ ಬಣ್ಣವನ್ನು ತಬ್ಬಿಕೊಳ್ಳುತ್ತಿತ್ತು. ಅಂತರಂಗದೊಳಗೆ ಎಂದೆಂದಿಗೂ ಗುಟ್ಟಾಗಿ ಬಚ್ಚಿಟ್ಟುಕೊಂಡ ಒಂದಷ್ಟು ಅಪ್ರಕಟಿತ ಭಾವನೆಗಳೂ, ನೆನಪುಗಳೂ ನಿರಂತರವಾಗಿದ್ದರೂ ಈ ಭೇಟಿ ಮಾತ್ರ ಬದುಕಿನ ಅತ್ಯಂತ ಅಪೇಕ್ಷಿತ ಉತ್ಕಟ ಕ್ಷಣಗಳಾಗಿರಲಿಲ್ಲವೇನೋ?

'ಯಾಕೆ ಮಾತಿಲ್ಲದೇ ಸುಮ್ನೇ ಕೂತೆ ಕೇಶವಾ? ನಿನ್ನ ಬಗ್ಗೆ ಹೇಳ್. ಹೆಂಡ್ತಿ ಮಕ್ಳ ಬಗ್ಗೆ ಹೇಳ್. ಯಾರೋ ನಾರ್ತ್ ಇಂಡಿಯನ್ನಾ ಮದ್ವೆಯಾಗಿದ್ದಿಯಂತೆ? ಝುಮ್ಮಂತಾ ಇದ್ದೀಯಂತೆ.' ಅವಳು ಕುಕ್ಕರ್ ಜೋಡಿಸುತ್ತಾ ಕೇಳಿದಳು.

ಸಟ್ಟನೆ ಎಚ್ಚೆತ್ತು ಸಮಯ ನೋಡಿಕೊಂಡೆ. ಬೆಳಗ್ಗೆ ಹತ್ತೂವರೆಗೆ ಸಿಕ್ಕಿದವಳು. ಸಮಯವಾಗಲೇ ಒಂದೂವರೆಯಾಗುತ್ತಿದೆ. ಬಾಲ್ಯದ ಗೆಳತಿಯೊಡನೆ ಹೀಗೆ ಹೊತ್ತು ಕಳೆಯುತ್ತಾ ಅದಾಗಲೇ ಮೂರು ಗಂಟೆಯಾಗಿ ಹೋಗಿದೆ! ಬದುಕಿನ ಯಾವ ಘನ ಉದ್ದೇಶಕ್ಕೆ ಹೀಗೆ ಇವಳೆದುರು ವಿಧೇಯನಾಗಿ ಕೂತಿದ್ದೇನೆ? ಯಾವುದನ್ನು ಮರೆಸಿ ಮತ್ಯಾವುದಕ್ಕೆ ಇವಳು ಮುಲಾಮು ಹಚ್ಚುತ್ತಾ ನೆನಪಿನ ಭಾರವನ್ನು ಕುಗ್ಗಿಸುತ್ತಿದ್ದಾಳೆ?

ಎರಡನೆಯ ಪಿಯುಸಿಯ ಕಡೆಯ ದಿನಗಳವು. ಮುಂದಿನ ಭವಿಷ್ಯದ ಚಿಂತೆಯಲ್ಲೇ ಭರದಿಂದ ಸಾಗುತ್ತಿದ್ದ ಕಡೆಯ ಹಂತದ ಓದಿನ ಉಮೇದು. ನೋಟು ಪುಸ್ತಕದೊಳಗೆ ನವಿಲುಗರಿಯಿಟ್ಟು ನವಿರಾಗಿ ಸವರಿ, ಸಣ್ಣಪುಟ್ಟ ಪತ್ರಗಳ ಗುಟ್ಟಿನ ರವಾನೆಯಾಗಿ ಅಕ್ಷರಗಳ ನಡುವೆ ಕನಸಿನ ಕನ್ನೆ ಕುಣಿಯುತ್ತಿದ್ದಂತಹ ಕಾಲವದು. ಪಾರುಗೆ ನಾನು ಪತ್ರ ಕೊಟ್ಟೆನೂ ಇಲ್ಲವೋ ಗೊತ್ತಿಲ್ಲ. ಆದರೆ ಬೇಕೆಂದೇ ನಾನು ಅವಳ ನೋಟ್ಸ್ ಅನ್ನೂ ಅವಳು ನನ್ನ ನೋಟ್ಸ್ ಅನ್ನೂ ವಿನಿಮಯ ಮಾಡಿಕೊಳ್ಳುತ್ತಾ ಮುತ್ತು ಪೋಣಿಸಿದಂತಹ ಅವಳ ದುಂಡು ಅಕ್ಷರಗಳ ನಡುವೆ ನನ್ನ ಅಕ್ಷರಗಳನ್ನೂ ಸೇರಿಸುತ್ತಾ ಗಂಟೆಗಟ್ಟಲೆ ಕೂರುತ್ತಿದ್ದದ್ದು ನಿಜ.

ಒಂದು ಮಧ್ಯಾಹ್ನ ನಾನು ಕಾಲೇಜ್ ಮುಗಿಸಿ ಮನೆಗೆ ಬಂದಾಗ ಶೇಷತ್ತೆ ಕಣ್ಣೊರೆಸಿಕೊಳ್ಳುತ್ತಾ ಅಮ್ಮನ ಮುಂದೆ ಚೌಕಿಯಲ್ಲಿ ಕುಳಿತಿದ್ದರು. ಅವರ ಪಿಸುಮಾತಿನ ಗುಸುಗುಸು ಅರ್ಧಂಬರ್ಧವಷ್ಟೇ ನನಗೆ ಕೇಳಿಸುತ್ತಿತ್ತು. ಮಾತಿನ ನಡುವೆ ಶೇಷತ್ತೆ ಮತ್ತೆ ಮತ್ತೆ ಕಂಬನಿ ಮಿಡಿಯುತ್ತಿದ್ದರು. ಅವರ ದುಃಖ ನನಗೆ ಅರ್ಥವಾಗಿರಲಿಲ್ಲ. ಅವೆಲ್ಲಾ ಅರ್ಥವಾಗುವ ವಯಸ್ಸೂ ನನ್ನದಲ್ಲವೇನೋ?

ವರುಷ ಹದಿನೆಂಟಾದರೂ ಪಾರು ಇನ್ನೂ ಮೈ ನೆರದಿಲ್ಲವೆಂಬ ಸಂಗತಿಯಾಗಲೇ ನನಗೆ ತಿಳಿದಿದ್ದು. ಅದಕ್ಕಾಗಿ ಶೇಷತ್ತೆ ಏನೇನು ಮನೆ ಔಷಧಿ ಮಾಡಿದರೂ ಪ್ರಯೋಜನವಾಗದೆ, ಪಾರು ಕಡೆಗೂ ದೊಡ್ಡವಳಾಗಿರಲಿಲ್ಲ. ಅದೇ ಚಿಂತೆಯಲ್ಲಿ ಕಡೇ ಮನೆ ಸರಸೋತಿ ಸೊಸೆಗೆ ಹೆರಿಗೆ ಮಾಡಿಸಲು ಬಂದಿದ್ದ ಸೂಲಗಿತ್ತಿ ಮೀನಾಕ್ಷಿ ಹತ್ತಿರ ಪಾರೋತಿಯನ್ನು ತೋರಿಸಿದಾಗ ಅವಳನ್ನು ತಪಾಸಣೆ ಮಾಡಿದ ಮೀನಾಕ್ಷಿ, ಪಾರುಗೆ ಗರ್ಭಕೋಶವಿದ್ದಂತೆ ಇಲ್ಲ ಎಂದು ಗುಟ್ಟಾಗಿ ಹೇಳಿ, ಪೇಟೆಗೆ ಹೋಗಿ ದೊಡ್ಡಾಸ್ಪತ್ರೆಯಲ್ಲಿ ಸರಿಯಾದ ಡಾಕ್ಟರ್‌ಗೆ ತೋರಿಸಿ ಎಂದಿದ್ದಳಂತೆ.

ಶೇಷತ್ತೆ ದಿಕ್ಕೇ ತೋಚದವರಾಗಿ ಅಮ್ಮನ ಮುಂದೆ ಕುಳಿತು ಒಂದೇ ಸಮನೆ ಅಳುತ್ತಿದ್ದರು.

'ಹಿಂಗಾದ್ರೆ ಮುಂದೆ ಪಾರು ಕತಿಯೆಂತಾ ಅಂಬಾ?' ಶೇಷತ್ತೆ ಅಳುತ್ತಲೇ ಆರ್ತವಾಗಿ ಕೇಳಿದ